# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 34/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಜಯರಾಮ ಎಂ. | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ ಹೆಸರು | ಃ ಮುದಾರ ಕೆ. | 14.02.2020 | |
| ವಯಸ್ಸು | ಃ 67 ವರ್ಷ | | |
| ವೃತ್ತಿ | ಃ ವಿನಾಯಕ ಟೀ ಅಂಗಡಿ ಮಾಲೀಕ | ಪ್ರಾ.ಸಾ. ಃ | 14 |
| ವಾಸಸ್ಥಳ | ಃ ಮೈಸೂರು | ಚಾ.ಸಾ. ಃ | 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಉದಯಗಿರಿ ಮಹಾತ್ಮಗಾಂಧಿ ರಸ್ತೆಯ ಡೋರ್ ನಂ. *13/ಎ,* ನಲ್ಲಿ ಒಂದು ಸಣ್ಣ ಟೀ ಅಂಗಡಿಯನ್ನು ಇಟ್ಟುಕೊಂಡು ಅಲ್ಲೇ ವಾಸವಾಗಿರುತ್ತೇನೆ. ನನಗೆ ಮೃತ ರಾಜು ಈತನ ಪರಿಚಯ ಇತ್ತು. ಆತನು ನಮ್ಮ ಅಂಗಡಿಗೆ ಟೀ ಕುಡಿಯಲು ಬರುತ್ತಿದ್ದನು. ದಿನಾಂಕಃ *13.03.2016* ರಂದು ಸುಮಾರು ಸಾಯಂಕಾಲ *4.00* ರಿಂದ *4.40* ಗಂಟೆಯ ಸುಮಾರಿಗೆ ಬೈಕ್ ನಲ್ಲಿ ಬಂದು ವಾಹನವನ್ನು ನಿಲ್ಲಿಸಿ ಟೀ ಕೇಳಿದರು. ನಾನು ಟೀ ಕೊಟ್ಟೆನು ಆತನು ದಿನ ಪತ್ರಿಕೆಯನ್ನು ನೋಡುತ್ತಾ ಟೀ ಕುಡಿಯುತ್ತಾ ಕುಳಿತಿದ್ದರು. ಅದೇ ಸಮಯಕ್ಕೆ ಜಯಕುಮಾರ ಎಂಬುವವನು ಅವರು ಬಂದು ಟೀ ಕೇಳಿದರು ಅವರಿಗೂ ಕೂಡ ಟೀ ಕೊಟ್ಟೆನು. ಅವರು ರಾಜು ಕುಳಿತ ಪಕ್ಕದಲ್ಲೇ ಒಂದು ಮರದ ಬೆಂಚು ಇತ್ತು ಅದರಲ್ಲಿ ಜಯಕುಮಾರ ಕುಳಿತುಕೊಂಡು ಟೀ ಕುಡಿಯುತ್ತಿದ್ದರು. ಸುಮಾರು ಸಾಯಂಕಾಲ *5.00* ಗಂಟೆಗೆ ಜಯಕುಮಾರ ಬಂದು ಟೀ ಹಣವನ್ನು ಕೊಟ್ಟಿರುತ್ತಾರೆ. ನಾನು ಕಾಫಿ ಲೋಟವನ್ನು ತೊಳೆಯಲು ಒಳಗಡೆ ಹೋದೆನು. ಆಗ ಹೊರಗಡೆಯಿಂದ ಒಂದು ಶಬ್ದ ಬಂದ ಹಾಗೆ ಆಯಿತು. ಆಗ ಜಯಕುಮಾರ ಕಿರುಚಿಕೊಂಡನು. ನಾನು ಒಳಗಡೆಯಿಂದ ಹೊರಗಡೆ ಬಂದು ನೋಡಿದಾಗ ರಾಜು ಈತನು ಮುಖವನ್ನು ನೆಲದ ಕಡೆ ಮಾಡಿ ಬಿದ್ದಿದನು. ಆತನಿಗೆ ರಕ್ತ ಬರುತ್ತಿತ್ತು. ಆಗ ನಾನು ನೋಡಿದಾಗ ಒಬ್ಬ ವ್ಯಕ್ತಿ ಕಪ್ಪು ಜರ್ಕಿನ್ ಹಾಕಿಕೊಂಡು ಮಚ್ಚನ್ನು ಕೈಯಲ್ಲಿ ಹಿಡಿದುಕೊಂಡು ಕೈಯನ್ನು ಒದರುತ್ತಾ ಹೋಗುತ್ತಿದ್ದನು. ಸ್ವಲ್ಪ ದೂರದಲ್ಲಿ ಒಬ್ಬ ವ್ಯಕ್ತಿಯು ಬೈಕಿನಲ್ಲಿ ಕುಳಿತು ಬೆನ್ನಿಗೆ ಸ್ಕೂಲ್ ಬ್ಯಾಗ್ ಹಾಕಿಕೊಂಡಿದ್ದನು. ಆ ಬೈಕಿನಲ್ಲಿ ಕುಳಿತುಕೊಂಡು ಹೊರಟು ಹೋದನು. ಸ್ಥಳದಲ್ಲಿ ಜನರು ಸೇರಿದರು. ಟ್ರಾಫಿಕ್ ಪೊಲೀಸ್

ಅಲ್ಲಿಗೆ ಬಂದು ಜನರ ಸಹಾಯದಿಂದ ಒಂದು ಆಟೋದಲ್ಲಿ ರಾಜು ಈತನನ್ನು ಹಾಕಿಕೊಂಡು ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದರು, ಜಯಕುಮಾರ ಅವರ ಹಿಂದೆ ಹೋದನು. ಸಾಯಂಕಾಲ *7.30* ಗಂಟೆಯ ಸುಮಾರಿಗೆ ರಾಜು ಈತನು ಮೃತಪಟ್ಟನು ಎಂದು ಜನರು ಮಾತನಾಡಿಕೊಳ್ಳುತ್ತಿದ್ದರು. ದಿನಾಂಕಃ *14.03.2016* ರಂದು ಉದಯಗಿರಿ ಪೊಲೀಸರು ಸ್ಥಳಕ್ಕೆ ಬಂದು ಮಹಜರ ಮಾಡುವಾಗ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಕಪ್ಪು ಜರ್ಕಿನ್ ಹಾಕಿಕೊಂಡು ಮತ್ತು ಮೋಟಾರು ಸೈಕಲ್ ನಲ್ಲಿ ಕುಳಿತುಕೊಂಡು ಹೋದ ಇಬ್ಬರೂ ವ್ಯಕ್ತಿಯ ಮುಖ ನೋಡಿರುವುದಿಲ್ಲ. ಆದರೆ ಹಿಂದಿನಿಂದ ನೋಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಗುರುತಿಸಲು ಆಗುವುದಿಲ್ಲ. ಮು,ಮಾ.*5* ರಂತೆ ಜರ್ಕಿನ್ ಇತ್ತು ಎಂದು ಹೇಳುತ್ತಾರೆ.

<u>ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ವಕೀಲರಿಂದಃ-</u>

. ಆರೋಪಿತರು ಸಮಯ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು